**ಓಂ ಶಾಂತಿ, ಬಾಪ್ ದಾದಾ. ಅವ್ಯಕ್ತ ಮುರಳಿ 02-02-1969.**

(ओम शान्ति,  बापदादा. अव्यक्त मुरली 02-02-1969)

***<u>ಅವ್ಯಕ್ತ ಮಿಲನದ ಅನುಭವದ ವಿಧಿ</u>*** (अव्यक्त मिलन के अनुभव की विधि)

ಪ್ರೇಮ ಸ್ವರೂಪ ಮಕ್ಕಳೇ, ಜ್ಞಾನ ಸಹಿತ ಪ್ರೇಮವೇ ಯಥಾರ್ಥ ಪ್ರೇಮವಾಗಿದೆ. ತಮ್ಮೆಲ್ಲರ ಪ್ರೇಮರಸ ಬಾಪ್ ದಾದಾರವನ್ನು ಎಳೆದು ತರುತ್ತದೆ. ಎಲ್ಲಾ ಮಕ್ಕಳ ಅಂತರಾಳದಲ್ಲಿ ಒಂದು ಆಸೆ ಕಂಡು ಬರುತ್ತದೆ. ಅದು ಯಾವುದು? ನಮಗೂ ತಮ್ಮ ಅವ್ಯಕ್ತ ವತನದ ಅನುಭವ ಮಾಡಿಸಿ ಎಂದು ಅನೇಕ ಮಕ್ಕಳು ಸಂದೇಶವನ್ನು ಕಳುಹಿಸಿದ್ದರು. ಈಗ ಎಲ್ಲಾ ಮಕ್ಕಳ ಆಸೆಗಳು ಪೂರ್ಣವಾಗುವ ಸಮಯ ಬಂದೇಬಿಟ್ಟಿದೆ. ಅರ್ಥಾತ್ ಎಲ್ಲರೂ ಸಂದೇಶಿಗಳಾಗುವರೆಂದು ತಿಳಿಯುವುದಲ್ಲ. ಅವ್ಯಕ್ತವತನದ ಅನುಭವವನ್ನು ಮಕ್ಕಳು ಮಾಡುವರು. ಆದರೆ ದಿವ್ಯಬುದ್ಧಿಯ ಆಧಾರದಿಂದ ಯಾರು ಈಗ ಅಲೌಕಿಕ ಅನುಭವ ಮಾಡಬಲ್ಲಿರೋ ಅವರು ದಿವ್ಯ ದೃಷ್ಟಿಯಿಂದ ಮಾಡುವುದರಿಂದಲೂ ಬಹಳ ಲಾಭದಾಯಕ, ಅಲೌಕಿಕ ಮತ್ತು ಅಮೂಲ್ಯವಾದದ್ದು. ಅವ್ಯಕ್ತ ಬಾಪ್ ದಾದಾರವರ ಮಿಲನ ಮಾಡಬೇಕು ಹೇಗೆ ಎಂಬುದರ ವಿಧಾನ ಹೀಗಿದೆ - ಏನೆಂದರೆ ಅಮೃತ ವೇಳೆ ನೆನಪಿನಲ್ಲಿ ಕುಳಿತುಕೊಳ್ಳಿ ಮತ್ತು ಇದೇ ಸಂಕಲ್ಪವನ್ನು ಇಟ್ಟುಕೊಳ್ಳಿ “ಈಗ ನಾವು ಅವ್ಯಕ್ತ ಬಾಪ್ ದಾದಾರವರ ಮಿಲನ ಮಾಡಬೇಕು” ಎಂದು. ಯಾರೆಲ್ಲ ಅವ್ಯಕ್ತ ತಂದೆಯೊಂದಿಗೆ ಮಿಲನ ಮಾಡಲು ಬಯಸುತ್ತೀರೋ ಅವರು ಮಾಡಬಹುದು. ಸಾಕಾರದಲ್ಲಿ ಮಿಲನದ ಸಮಯ ಗೊತ್ತಾದಾಗ ನಿದ್ದೆ ಬರುತ್ತಿರಲಿಲ್ಲ ಮತ್ತು ಸಮಯಕ್ಕೆ ಮೊದಲೇ ಬುದ್ಧಿಯಿಂದ ಹೇಗೆ ಇದೇ ಅನುಭವದಲ್ಲಿರುತ್ತಿದ್ದಿರಿ. ಅದೇ ರೀತಿ ಈಗಲೂ ಅವ್ಯಕ್ತ ಮಿಲನದ ಅನುಭವ ಮಾಡಲು ಬಯಸಿದರೆ ಇದು ಅದರ ಬಹಳ ಸಹಜ ವಿಧಿಯಾಗಿದೆ--ಅವ್ಯಕ್ತ ಸ್ಥಿತಿಯಲ್ಲಿದ್ದು ಆತ್ಮಿಕ ಸಂಭಾಷಣೆ ಮಾಡಿ. ಆಗ ನಿಜವಾಗಿಯೂ ತಂದೆಯ ಜೊತೆಗೆ ಮಾತನಾಡುವ ಅನುಭವ ಮಾಡಿವಿರಿ ಮತ್ತು ಇದೇ ಆತ್ಮಿಕ ಸಂಭಾಷಣೆಯಲ್ಲಿ ಹೇಗೆ ಸಂದೇಶಿಗಳಿಗೆ ಅನೇಕ ದೃಶ್ಯ ತೋರಿಸಲಾಗುತ್ತದೆಯೋ ಹಾಗೆ ಬಹಳ ಗುಹ್ಯ, ನಿಗೂಢ, ರಹಸ್ಯಗಳನ್ನು ಬುದ್ಧಿ ಯೋಗದಿಂದ ಅನುಭವ ಮಾಡುವಿರಿ. ಆದರೆ ಒಂದು ಮಾತು ಈ ಅನುಭವ ಮಾಡಲು ಅವಶ್ಯಕವಾಗಿದೆ. ಯಾವುದು ಗೊತ್ತೇ? ಯಾರು ಇಡೀ ದಿನ ಅವ್ಯಕ್ತ ಸ್ಥಿತಿಯಲ್ಲಿ ಅಂತರ್ಮುಖಿ ಸ್ಥಿತಿಯಲ್ಲಿ ಸ್ಥಿತರಾಗಿರುವರೊ ಅವರೇ ಅಮೃತವೇಳೆಯಲ್ಲಿಯೂ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಲು ಸಾಧ್ಯ. ಅವರು ಅಮೃತ ವೇಳೆ ಈ ಅನುಭವವನ್ನು ಮಾಡಬಹುದು. ಅದರಿಂದ ಒಂದು ವೇಳೆ ಸ್ನೇಹವಿದ್ದರೆ, ಮತ್ತು ಮಿಲನದ ಆಸೆ ಇದ್ದರೆ ಈ ವಿಧಿ ಬಹಳ ಸಹಜವಾಗಿದೆ. ಮಾಡಬಲ್ಲವರು ಮಾಡಬಹುದು ಮತ್ತು ಮಿಲನದ ಸಂಭಾಷಣೆಯ ಅಮೂಲ್ಯವಾದ ಅನುಭವ ಪ್ರಾಪ್ತಿ ಮಾಡಿಕೊಳ್ಳಬಹುದು.

ವತನದಲ್ಲಿ ಕುಳಿತಾಗ ಅನೇಕ ಮಕ್ಕಳ ಅಂತರಾಳದ ಕೂಗು ಕೇಳಿಸುತ್ತಿರುತ್ತದೆ. ಶಿವ ತಂದೆ ಬಹಳ ಕಠಿಣವಾದವರೆಂದು ತಾವು ಭಾವಿಸಬಹುದು ಆದರೆ ಏನಾಗುತ್ತದೆಯೋ ಅದರಲ್ಲಿ ರಹಸ್ಯ ಮತ್ತು ಕಲ್ಯಾಣವಿದೆ. ಅದರಿಂದ ಕೂಗನ್ನು ಕೇಳಿ ಹರ್ಷಿತನಾಗುತ್ತಿರುತ್ತೇನೆ. ಬಾಪ್ ದಾದಾ ನಿರ್ಮೋಹಿಯಾಗಿದ್ದಾರಾ? ತಾವು ಮಕ್ಕಳೆಲ್ಲರೂ ನಿರ್ಮೋಹಿಗಳಾಗಿದ್ದೀರಾ? ನಿರ್ಮೋಹಿಗಳಾಗಿಬಿಟ್ಟಿದ್ದೀರಾ?ಬಾಪ್ ದಾದಾ ನಿರ್ಮೋಹಿ ಮತ್ತು ಮಕ್ಕಳಲ್ಲಿ ಶುದ್ಧ ಮೋಹವಿದ್ದರೆ ಮಿಲನ ಹೇಗಾಗುವುದು? ಬಾಪ್ ದಾದಾರವರಲ್ಲಿ ಶುದ್ಧ ಮೋಹವಿತ್ತೇ? (ಮಕ್ಕಳಲ್ಲಿ ಸಾಕಾರ ತಂದೆಗೆ ಶುದ್ಧ ಪ್ರೀತಿ ಇತ್ತು) ಶಿವತಂದೆಗೆ ಇಲ್ಲವೇ? ಬಾಪ್ ದಾದಾ ರವರದ್ದು ಇದೆ. (ಆದರೆ ನಮ್ಮದರ ಹಾಗೆ ಇಲ್ಲ) ಶುದ್ಧ ಮೋಹ ಮಕ್ಕಳಿಗಿಂತಲೂ ಹೆಚ್ಚಾಗಿದೆ. ಆದರೆ ಬಾಪ್ ದಾದಾ ಮತ್ತು ಮಕ್ಕಳಲ್ಲಿ ಒಂದು ಅಂತರವಿದೆ. ಅವರು ಶುದ್ಧ ಮೋಹದಲ್ಲಿ ಬಂದರೂ ನಿರ್ಮೋಹಿಗಳಾಗಿದ್ದಾರೆ ಮತ್ತು ಮಕ್ಕಳು ಶುದ್ಧ ಮೋಹದಲ್ಲಿ ಬಂದಾಗ, ಪ್ರಿಯರಾಗುತ್ತಾರೆ ಇಲ್ಲವೇ ನಿರ್ಲಿಪ್ತರಾಗುವ ಸ್ವರೂಪದಲ್ಲಿ ಬರುತ್ತಾರೆ. ಆದರೆ ಬಾಪದಾದಾ ನಿರ್ಲಿಪ್ತ ಮತ್ತು ಪ್ರಿಯರು ಜೊತೆಜೊತೆಗೆ ಆಗುತ್ತಾರೆ. ಉಳಿದ ಈ ಅಂತರವೇನಿದೆ, ಇದನ್ನು ದೂರ ಮಾಡಿದಾಗ ಏನಾಗುವಿರಿ? ಅಂತರ್ಮುಖಿ, ಅವ್ಯಕ್ತ, ಅಲೌಕಿಕರಾಗುವಿರಿ. ಈಗ ಸ್ವಲ್ಪ ಸ್ವಲ್ಪ ಲೌಕಿಕತನವೂ ಸೇರಿಕೊಳ್ಳುತ್ತದೆ. ಆದರೆ ಯಾವಾಗ ಈ ಅಂತರವನ್ನು ದೂರ ಮಾಡುತ್ತೀರೋ ಆಗ ಪೂರ್ಣ

ಅಲೌಕಿಕ ಮತ್ತು ಅಂತರ್ಮುಖಿ, ಅವ್ಯಕ್ತ ಸೂಕ್ಷ್ಮ ದೇವತೆಗಳಾಗಿ ಕಂಡು ಬರುವಿರಿ. ಈ ಸಾಕಾರ ವತನದಲ್ಲಿ ಇರುತ್ತಲೂ ಸೂಕ್ಷ್ಮದೇವತೆಯಾಗಬಹುದು. ತಾವೇಕೆ ವತನಕ್ಕೆ ಹೋಗಿ ಸೂಕ್ಷ್ಮ ದೇವತೆಯಾದಿರಿ ಎಂದು ತಾವು ಮತ್ತೆ ಹೇಳುವಿರಿ. ಇಲ್ಲೇ ಆಗಬಹುದಿತ್ತಲ್ಲ. ಆದರೆ ಇಲ್ಲ, ಮಕ್ಕಳು ಮಾಡಬೇಕಾದುದನ್ನು ಮಕ್ಕಳು ಮಾಡಬೇಕು ಹಾಗೂ ತಂದೆಯ ಕಾರ್ಯವನ್ನು ತಂದೆಯೇ ಮಾಡುವರು. ಮಕ್ಕಳಿಗ ಶಿಕ್ಷಣ ಪಡೆದು ಪ್ರದರ್ಶನ ಮಾಡಬೇಕಾಗಿದೆ. ಶಿಕ್ಷಕನಿಗೆ ಅಧ್ಯಯನದ ಪ್ರದರ್ಶನ ಮಾಡಬೇಕಾಗಿಲ್ಲ. ಶಿಕ್ಷಕನು ಪಾಠ ಓದಿಸಬೇಕು. ವಿದ್ಯಾರ್ಥಿ ಶಿಕ್ಷಣ ಪ್ರದರ್ಶನ ಮಾಡಬೇಕು. ಷೋಕೇಸ್ ನಲ್ಲಿ ಶಕ್ತಿಯರೂ ಮತ್ತು ಪಾಂಡವರೂ ಬರಬೇಕಾಗಿದೆ. ಬಾಪ್ ದಾದಾರಂತೂ ಗುಪ್ತವಾಗಿದ್ದಾರೆ.

ಈಗ ಎಲ್ಲರ ಮನದಲ್ಲಿಯೂ ಬೇಗನೆ ನಾಟಕದ ದೃಶ್ಯಗಳು ಸಮಾಪ್ತಿಯಾಗಲಿ ಎಂಬುದೇ ಸಂಕಲ್ಪವಾಗಿದೆ. ಪೂರ್ವ ನಿಯೋಜಿತ ಭವಿಷ್ಯದಂತೆ ಖಂಡಿತವಾಗಿ ನಡೆಯುವುದು. ಆದರೆ ಇದರಲ್ಲಿ ಒಂದು ವೇಳೆ ಕಲ್ಪದ ಹಿಂದಿನಂತೆ ಸಂಕಲ್ಪ ಬರುತ್ತದೆಯಾದರೆ ಆ ಸಂಕಲ್ಪದ ಜೊತೆ ಜೊತೆಗೆ ಮೊದಲು ಪುರುಷಾರ್ಥ ಮಾಡಿರಬಹುದು ಎಂಬುದಂತೂ ಕಂಡು ಬರುತ್ತದೆ. ಅದರಿಂದ ಈ ನಾಟಕದ ದೃಶ್ಯವನ್ನು ಬೇಗನೆ ಪೂರ್ಣ ಮಾಡಿ ಎಲ್ಲರೂ ಅವ್ಯಕ್ತ ನಿವಾಸಿಗಳಾಗಬೇಕೆಂಬ ಸಂಕಲ್ಪ ಬರುತ್ತದೆ. ಆಗಲೇಬೇಕು. ಆದರೆ ಮಕ್ಕಳಲ್ಲಿ ಎಷ್ಟೊಂದು ಶಕ್ತಿ ಇದೆ ಎಂದರೆ ಅವ್ಯಕ್ತ ವತನವನ್ನೇ ವ್ಯಕ್ತಕ್ಕೆ ಎಳೆದು ತರಬಲ್ಲರು. ಅವ್ಯಕ್ತ ವತನದ ನಕ್ಷೆಯನ್ನು ವ್ಯಕ್ತ ವತನದಲ್ಲಿ ಮಾಡಬಹುದು. ಪ್ರತಿಯೊಬ್ಬರ ಆಸೆಗಳೂ ಸಾಕಷ್ಟಿವೆ. ಈ ಸಾಕಾರ ಜಗತ್ತಿನಲ್ಲಿ ಬಹಳ ದೊಡ್ಡ ಆಫೀಸ್ ಇದ್ದು ಟೆಲಿಫೋನ್ ಮತ್ತು ಟೆಲಿಗ್ರಾಮ್ ನ ತರಂಗಗಳಂತೆ ಬಹಳ ಶುದ್ಧ ಸಂಕಲ್ಪಗಳು ವತನವನ್ನು ತಲುಪುತ್ತಿರುತ್ತವೆ. ಈಗ ಏನು ಮಾಡಬೇಕು?

ಅನೇಕ ಮಕ್ಕಳಲ್ಲಿ ಲೋಕ ಸಂಗ್ರಹದ ಪ್ರತಿ ಪ್ರಶ್ನೆಗಳೂ ಸಹ ಇವೆ. ಸಾಕಾರದ ಮುಖಾಂತರ ಸೂಕ್ಷ್ಮವತನ ಇಲ್ಲವೆಂದು ಹೇಳಿದಾಗ, ಬಾಬಾ ಎಲ್ಲಿಗೆ ಹೋದರು? ಎಂದು ಕೆಲವು ಮಕ್ಕಳು ಗಲಿಬಿಲಿಗೊಂಡಿದ್ದಾರೆ. ಎಲ್ಲಿಂದ ಮಿಲನ ಮಾಡಲು ಬರುತ್ತಾರೆ? ಎಲ್ಲಿಗೆ ಈ ಸಂದೇಶವನ್ನು ಕಳಿಸುತ್ತಾರೆ? ಏಕೆ ಭೋಗ ಇಡುವಿರಿ. ಇದಕ್ಕೂ ರಹಸ್ಯವಿದೆ. ತಾವು ನೋಡಿರಬಹುದು ಹೀಗೇಕೆ ಹೇಳಲಾಯಿತು? ಕೆಲವೊಮ್ಮೆ ಚಿಕ್ಕ ಮಕ್ಕಳು ಯಾವುದೇ ವಸ್ತುವನ್ನು, ಅದು ಎಷ್ಟೇ ಒಳ್ಳೆಯದಿದ್ದರೂ ಅವಶ್ಯಕತೆಗಿಂತ ಹೆಚ್ಚು ಬಯಸಿದ್ದಾದರೆ ಎಂದಾಗ ಏನು ಮಾಡಲಾಗುತ್ತದೆ? ಆ ವಸ್ತುವನ್ನು ಅವರ ಕಣ್ಣಿಂದ ಬಚ್ಚಿಟ್ಟು ಅದು ಇಲ್ಲವೆಂದು ಹೇಳಿ ಅದರ ಬಗೆಗಿನ ಹೆಚ್ಚಿನ ಆಸಕ್ತಿಯನ್ನು ಕಡಿಮೆ ಮಾಡುವಂತೆ, ವರ್ತಮಾನ ಸಮಯದಲ್ಲಿ ಕೆಲವು ಮಕ್ಕಳು ಈ ಮಾತುಗಳಿಗೆ ಹೆಚ್ಚು ಅಂಟಿಕೊಂಡಿದ್ದರು. ಅದನ್ನು ಬಿಡಿಸಲು ಸೂಕ್ಷ್ಮವತನವಿಲ್ಲ ಎಂದು ಸಾಕಾರದಲ್ಲಿ ಹೇಳುತ್ತಿದ್ದರು. ಮಕ್ಕಳ ಬುದ್ಧಿಯನ್ನು ಈ ಮಾತಿನಿಂದ ದೂರ ಮಾಡಲು ಹೇಳಲಾಗಿತ್ತು. ಆದರೆ ಒಂದು ವೇಳೆ ಮಕ್ಕಳಿಂದ ವಸ್ತುವನ್ನು ಬಚ್ಚಿಟ್ಟಾಗ ಆ ವಸ್ತು ಎಂಬುದು ಇದರ ಭಾವಾರ್ಥವಲ್ಲ. ಅಂಟಿಸಿಕೊಂಡ ವಸ್ತುವನ್ನು ಬಿಡಿಸಲು ಇದೊಂದು ಯುಕ್ತಿ. ಅದರಿಂದ ಈ ಯುಕ್ತಿ ಮಾಡಲಾಯಿತು. ಏಕೆ ಹಾಗೆ ಹೇಳಾಗಿತ್ತು ಎಂಬುದಕ್ಕೆ ಇದೇ ಮೂಲ ಕಾರಣವಾಗಿದೆ. ಸೂಕ್ಷ್ಮವತನವಿಲ್ಲವಾದರೆ ಭೋಗ ಎಲ್ಲಿ ಇಡುವಿರಿ? ಈ ಪದ್ಧತಿಯನ್ನು ಕಾಯಂ ಏಕೆ ಮಾಡಿದಿರಿ? ಎಂತಹುದೇ ವಿಶೇಷ ಕಾರ್ಯವಿದ್ದಾಗ ಸಂದೇಶವನ್ನು ಹೇಗೆ ಕೇಳುತ್ತಿದ್ದೀರಿ? ಅದರಿಂದ ಸೂಕ್ಷ್ಮವತನವಿಲ್ಲವೆಂದಲ್ಲ. ಸೂಕ್ಷ್ಮವತನವಿದೆ. ಆದರೆ ಈಗ ಸೂಕ್ಷ್ಮವತನಕ್ಕೆ ಹೋಗಿ ಬರುವ ಬದಲು ಸ್ವಯಂ ಸೂಕ್ಷ್ಮವತನವಾಸಿಯಾಗಬೇಕು ಎಂಬುದೇ ಮಕ್ಕಳ ಪ್ರತಿ ಬಾಪ್ ದಾದಾರವರಿಗೆ ಇರುವ ಆಸೆ. ಬಂದು ಹೋಗೋದು ಜಾಸ್ತಿಯಾಗಬಾರದು. ಸಂಪಾದನೆ ಯಾವುದರಲ್ಲಿದೆ? ಆದ್ದರಿಂದ ತಂದೆ ಮಕ್ಕಳ ಸಂಪಾದನೆಯನ್ನು ನೋಡುತ್ತಾರೆ ಮತ್ತು ಸಂಪಾದನೆಗೆ ಯೋಗ್ಯರನ್ನಾಗಿ ಮಾಡುತ್ತಾರೆ. ಆದ್ದರಿಂದ ಈ ಎಲ್ಲಾ ರಹಸ್ಯಗಳನ್ನು ಹೇಳುತ್ತಿದ್ದರು. ಏಕೆ ಹೇಳಿದ್ದು ಮತ್ತು ಏನು ಎಂಬುದು ಈಗ ತಿಳಿಯಿತೇ? ಸೂಕ್ಷ್ಮವತನದ ಅವ್ಯಕ್ತ ಅನುಭವವನ್ನು ಅನುಭವ ಮಾಡಿ. ಸೂಕ್ಷ್ಮ ಸ್ಥಿತಿಯ ಅನುಭವ ಮಾಡಿ. ಬಂದು ಹೋಗುವ ಆಸೆ ಅಲ್ಪಕಾಲದ್ದು. ಅಲ್ಪಕಾಲದ ಬದಲು ಸದಾ ತಮ್ಮನ್ನು ಸೂಕ್ಷ್ಮವತನವಾಸಿಯನ್ನಾಗಿ ಏಕೆ ಮಾಡಿಕೊಳ್ಳೋದಿಲ್ಲ? ಸೂಕ್ಷ್ಮವತನವಾಸಿಯನ್ನಾಗಿ ಮಾಡಿಕೊಳ್ಳುವುದರಿಂದಲೇ ಬಹಳ ಅದ್ಭುತ ಅನುಭವಗಳನ್ನು ಮಾಡುವಿರಿ. ತಮ್ಮ ಈ ಅನುಭವ ಮತ್ತು ಸಂದೇಶಿಗಳ ಅನುಭವದಲ್ಲಿ ಎಷ್ಟು ವ್ಯತ್ಯಾಸವಿದೆಯೆಂದು ಸ್ವತಃ ತಾವೇ

ವರ್ಣನೆ ಮಾಡಿರುವಿರಿ. ಅದು ಸಂಪಾದನೆಯಲ್ಲ, ಇದು ಸಂಪಾದನೆಯ ಜೊತೆಗೆ ಅನುಭವವೂ ಆಗಿದೆ. ಆದ್ದರಿಂದ ಒಂದೇ ಸಮಯದಲ್ಲಿ ಎರಡು ಪ್ರಾಪ್ತಿಗಳಾಗುವುದು ಒಳ್ಳೆಯದೋ ಅಥವಾ ಒಂದನ್ನೇ ಬಯಸುತ್ತಿರೋ?

ಬಾಪ್ ದಾದಾ ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳುತ್ತಿದ್ದರು ಆದರೆ ಅವರೀಗ ಹೊರಟು ಹೋದರು ಎಂಬ ಪ್ರಶ್ನೆಯೂ ಅನೇಕ ಮಕ್ಕಳ ಮನಸ್ಸಿನಲ್ಲಿದೆ. ಆದರೆ ಅವರು ಹೊರಟು ಹೋಗಿದ್ದಾರೆಯೇ? ದಿಬ್ಬಣ ಮತ್ತು ಮಕ್ಕಳಿಲ್ಲದೆ ಮುಕ್ತಿಧಾಮಕ್ಕೆ ಹೋಗುವುದಿಲ್ಲ. ದಿಬ್ಬಣವಿಲ್ಲದೆ ಒಂಟಿಯಾಗಿ ಹೋಗಬಹುದೇ? ದಿಬ್ಬಣ ತಯಾರಿದೆಯೇ? ಇದುವರೆಗೆ ದಿಬ್ಬಣದೊಂದಿಗೆ ಹೋಗುವುದು ಎಂದು ಹೇಳಿದ್ದೇವೆ. ದಿಬ್ಬಣವೇ ಇನ್ನೂ ಶೃಂಗರಿಸಲ್ಪಡುತ್ತಿದೆ ಎಂದರೆ ಒಬ್ಬರೇ ಹೇಗೆ ಹೋಗುವುದು? ಸೂಕ್ಷ್ಮವತನದಲ್ಲಿಯೇ ಇನ್ನೂ ಅವ್ಯಕ್ತ ರೂಪದಿಂದ ಸ್ಥಾಪನಾ ಕಾರ್ಯ ನಡೆಯುವುದು. ಎಲ್ಲಿಯವರೆಗೆ ಸ್ಥಾಪನೆಯ ಕಾರ್ಯ ಸಮಾಪ್ತಿ ಆಗುವುದಿಲ್ಲವೋ ಅಲ್ಲಿಯವರೆಗೆ, ಕಾರ್ಯ ಸಫಲವಾಗದ ಹೊರತು ಮನೆಗೆ ಹೋಗುವುದಿಲ್ಲ, ಜೊತೆಯಲ್ಲೇ ಹೋಗುವುದು ಮತ್ತು ಹೋದಮೇಲೆ ಏನು ಮಾಡುವುದು? ಏನು ಮಾಡುವುದು ಅಂತ ಗೊತ್ತಿದೆಯಾ? ಜೊತೆಯಲ್ಲೇ ಹೋಗುವುದು ಮತ್ತು ಜೊತೆಯಲ್ಲೇ ಇರುವುದು. ಮತ್ತೆ ಜೊತೆ ಜೊತೆಯಲ್ಲೇ ಸೃಷ್ಟಿಯ ಮೇಲೆ ಬರುವುದು. "ಎಂದಿಗೂ ಕೈ ಬಿಡುವುದಿಲ್ಲ ಮತ್ತು ಜೊತೆ ಬಿಡುವುದಿಲ್ಲ" ಎಂಬ ಮಕ್ಕಳ ಗೀತೆಯಂತೆ, ಇದು ಮಕ್ಕಳ ವಚನವಾಗಿದ್ದರೆ ತಂದೆಯದೂ ಇದೇ ವಚನವಾಗಿದೆ. ತಂದೆ ತನ್ನ ವಚನವನ್ನು ಬದಲಾಯಿಸುವುದಿಲ್ಲ. ಮತ್ತೆ ಏನಾದರೂ ಪ್ರಶ್ನೆ ಇದೆಯಾ? ಹಾಗೆಯೇ ಸಮಯ ಕಳೆದಂತೆ ಎಲ್ಲವೂ ಸ್ಪಷ್ಟವಾಗುತ್ತದೆ. ಜನ್ಮವಾಗುವುದೋ ಇಲ್ಲವೋ ಗೊತ್ತಿಲ್ಲ ಎಂಬ ವಿಚಾರವೂ ಅನೇಕರ ಮನದಲ್ಲಿದೆ. ಜನ್ಮ ವಾಗುವುದೇ? ಹೇಗೆ ತಮ್ಮ ಮಮ್ಮಾರವರ ಜನ್ಮವಾಯಿತೋ ಹಾಗೆಯೇ ಆಗುವುದೇ? ಮಕ್ಕಳ ವಿವೇಕ ಏನು ಹೇಳುತ್ತದೆ? ನಾಟಕದ ಪೂರ್ವ ಯೋಜನೆಯನ್ನು ನೋಡಬಲ್ಲಿರಾ? ಸ್ವಲ್ಪ-ಸ್ವಲ್ಪ ನೋಡಬಲ್ಲಿರಾ? ನಾವು ತ್ರಿಕಾಲದರ್ಶಿ ತಂದೆಯ ಮಕ್ಕಳಾಗಿದ್ದೇವೆ ಎಂದು ತಾವು ಎಲ್ಲರಿಗೂ ಹೇಳಿದ್ದೀರಿ ಅಂದಮೇಲೆ ಬರುವ ನಾಳೆಯ ಬಗೆಗೆ ತಿಳಿದಿಲ್ಲವೇ? ತಮ್ಮ ಮನದ ವಿವೇಕದ ಅನುಸಾರ ಏನಾಗಬೇಕು? ಅವ್ಯಕ್ತ ಸ್ಥಿತಿಯಲ್ಲಿದ್ದು 'ಹೌದು' ಅಥವಾ 'ಇಲ್ಲ' ಎಂದು ಹೇಳಿದಾಗ ಉತ್ತರ ದೊರೆಯುವುದು. (ಆಗ ಬಾಪದಾದರವರು ಮೂರ್ನಾಲ್ಕು ಜನರನ್ನು ಕೇಳಿದರು). ಬಹುತೇಕ ಜನರ ವಿಚಾರ ಇಲ್ಲ ವೆಂದಾಗಿತ್ತು. ಇಂದೇ ಉತ್ತರ ಬೇಕಾ ಅಥವಾ ಆಮೇಲೆ? ಕೋಲಾಹಲವಿಲ್ಲವಷ್ಟೇ? ಇದು ಒಂದು ಆಟದ ರಚನೆ. ಚಿಕ್ಕ ಮಕ್ಕಳು ಹೊಂಡದಲ್ಲಿ ಕಲ್ಲನ್ನು ತೂರಿ ಅಲೆಗಳ ಜೊತೆಗೆ ಆಟವಾಡುತ್ತಾರೆ, ಅಂತೆಯೇ ಇದೂ ಒಂದು ಆಟವಾಗಿದೆ. ತಂದೆ ನಿಮ್ಮೆಲ್ಲರ ವಿಚಾರ ಸಾಗರದಲ್ಲಿ ಪ್ರಶ್ನೆಗಳ ಕಲ್ಲನ್ನೆಸೆದು ನಿಮ್ಮ ಬುದ್ಧಿ ರೂಪಿ ಸಾಗರದಲ್ಲಿ ಅಲೆಗಳನ್ನು ಉತ್ಪನ್ನ ಮಾಡುತ್ತಿದ್ದಾರೆ. ಅದೇ ಅಲೆಗಳ ಆಟವನ್ನು ಬಾಪ್ ದಾದಾ ನೋಡುತ್ತಿದ್ದರು. ತಮ್ಮೆಲ್ಲರೊಂದಿಗೆ ಅವ್ಯಕ್ತ ರೂಪದಲ್ಲಿ ಸ್ಥಾಪನೆಯ ಕಾರ್ಯದಲ್ಲಿ ತೊಡಗಿರುವವರು. ಎಲ್ಲಿಯವರೆಗೆ ಸ್ಥಾಪನೆಯ ಪಾತ್ರವಿರುವುದೋ ಅಲ್ಲಿಯವರೆಗೆ ಅವ್ಯಕ್ತ ರೂಪದಲ್ಲಿ ತಮ್ಮೆಲ್ಲರೊಂದಿಗೆ ಇರುವರು. ತಿಳಿಯಿತೇ? ವತನದಲ್ಲಿ ಮಮ್ಮಾರವರನ್ನೂ ಪ್ರಕಟ ಮಾಡಲಾಯಿತು. ಏನು ಮಾತುಗಳು ನಡೆದವು ಎಂಬುದು ಗೊತ್ತೇ? ತಂದೆಯೇ ತಾವು ಕುಳಿತುಕೊಳ್ಳಿ, ನಾವು ಎಲ್ಲ ಕೆಲಸ ಮಾಡುವೆವು ಎಂದು ಹೇಗೆ ಸಾಕಾರ ರೂಪದಲ್ಲಿ ಸಾಕಾರ ವತನದಲ್ಲಿ ಹೇಳುತ್ತಿದ್ದರೋ ಹಾಗೆಯೇ ವತನದಲ್ಲಿಯೂ ನಾವೆಲ್ಲ ಸ್ಥಾಪನೆಯ ಕಾರ್ಯಕ್ಕಾಗಿ ಏನು ಮಾಡಬೇಕಾಗಿದೆಯೋ ಅದನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ತಾವು ಮಕ್ಕಳೊಂದಿಗೆ ಇದ್ದು ಮಕ್ಕಳನ್ನು ಖುಷಿ ಪಡಿಸುತ್ತಿರಿ ಎಂದು ಸಕಾರದಲ್ಲಿ ಹೇಳುತ್ತಿದ್ದರು, ಇದೇ ಆತ್ಮಿಕ ಸಂಭಾಷಣೆ ವತನದಲ್ಲಿ ನಡೆದಿತ್ತು. ನಮ್ಮ ಮಮ್ಮಾಎಲ್ಲಿ ಹೋದರೆಂದು ತಮ್ಮೆಲ್ಲರ ಮನದಲ್ಲಿರಬೇಕಲ್ಲವೇ? ಈಗ ಈ ರಹಸ್ಯವನ್ನು ಸ್ಪಷ್ಟ ಮಾಡುವ ಸಮಯವಲ್ಲ. ಅವರು ಎಲ್ಲಿದ್ದಾರೆ ಮತ್ತು ಏನು ಮಾಡುತ್ತಿದ್ದಾರೆ ಎಂದು ಸ್ವಲ್ಪ ಸಮಯದ ನಂತರ ಹೇಳುತ್ತೇವೆ. ಭಿನ್ನ ನಾಮ ರೂಪದಿಂದ ಸ್ಥಾಪನೆಯ ಕಾರ್ಯದಲ್ಲಿ ಸಹಯೋಗಿಯಾಗಿದ್ದಾರೆ. ಒಳ್ಳೆಯದು - ಈಗ ಸಮಯವಾಯಿತು.

ಇಂದು ವತನದಲ್ಲಿ ಬೆಳಗ್ಗೆಯಿಂದ ದೂರದಿಂದಲೇ ಸುಗಂಧ ಬರುತ್ತಿತ್ತು. ಸ್ನೇಹದಿಂದ ಹೇಗೆ ಅಡುಗೆ ಮಾಡುತ್ತಿದ್ದಾರೆ ಎಂಬುದನ್ನು ನೋಡುತ್ತಿದೆವು. (ದಾದೀಜಿಯವರೊಂದಿಗೆ) ಅಡುಗೆ ಮನೆಯಲ್ಲಿ ಸುತ್ತಾಡುತ್ತಾ ತಾವು ನೋಡಿದ್ದೀರಾ? ವಸ್ತುಗಳ ಸುಗಂಧವಲ್ಲ ಸ್ನೇಹದ ಸುಗಂಧ ಬರುತ್ತಿತ್ತು. ಇದು ಸ್ನೇಹದ ಲಕ್ಷಣವಾಗಿದೆ. ಅವಿನಾಶಿಯಾದ ಸ್ನೇಹವಿದೆಯೇ? ಎಲ್ಲರ ನೆನಪು

ತಲುಪುತ್ತದೆ, ಆದರೆ ಅದರ ಪ್ರತಿಕ್ರಿಯೆ ಪಡೆಯಲು ಸ್ಥಿತಿ ಬೇಕು. ಸಾಕಾರದಲ್ಲಿ ಹೇಗೆ ಮಕ್ಕಳು ತಂದೆ ಎನ್ನುತ್ತಲೇ ಪ್ರತಿಕ್ರಿಯೆ ಸಿಗುತ್ತದೆ. ವ್ಯಕ್ತ ಭಾವಗಳನ್ನು ಬಿಟ್ಟಾಗ ಈಗಲೂ ಪ್ರತಿಕ್ರಿಯೆ ಬೇಗನೆ ಸಿಗುವುದು. ಈಗಂತೂ ಇನ್ನು ಹೆಚ್ಚು ನಾಲ್ಕು ಕಡೆಗಳಲ್ಲಿ ಸೇವೆ ಮಾಡುವ ಅನುಭವವಾಗುತ್ತಿದೆ. ಈಗ ಅವ್ಯಕ್ತರಾದ ಕಾರಣ ಮತ್ತೊಂದು ವಿಶೇಷತೆ ಹೆಚ್ಚಾಗಿದೆ. ಅದೇನು ಗೊತ್ತೇ? ಮೊದಲು ಬಹಿರ್ಯಾಮಿಯಾಗಿದ್ದೆ, ಈಗ ಅಂತರ್ಯಾಮಿಯಾಗಿರುವೆ. ಅವ್ಯಕ್ತ ಸ್ಥಿತಿಯಲ್ಲಿ ಅರಿಯುವ ಅವಶ್ಯಕತೆಯಿಲ್ಲ. ಸ್ವತಃ ಕ್ಷಣಮಾತ್ರದಲ್ಲಿ ಎಲ್ಲರ ನಕ್ಷೆ ನೋಡಲು ಬರುತ್ತದೆ. ಅದರಿಂದ ಮೊದಲಿಗಿಂತ ಒಂದು ಗುಣ ಹೆಚ್ಚಾಗಿದೆ ಎಂದು ಹೇಳುತ್ತಿದ್ದೇನೆ. ಅವ್ಯಕ್ತ ಸ್ಥಿತಿಯಲ್ಲಿ ಸುಗಂಧದಿಂದಲೇ ಹೊಟ್ಟೆ ತುಂಬುತ್ತದೆ. ಇದು ತಮಗೆ ಗೊತ್ತಿದೆಯಾ?

ಒಂದು ಮುಖ್ಯ ಶಿಕ್ಷಣವನ್ನು ಮಕ್ಕಳಿಗೆ ಕೊಡುತ್ತಿದ್ದೇವೆ. ಎಲ್ಲ ಮಕ್ಕಳ ಬುದ್ಧಿಯಲ್ಲಿ ಈಗ ಸೇವೆಯನ್ನಂತೂ ಮಾಡಲೇಬೇಕು ಎಂಬ ಗುರಿಯಿದೆ, ಆದರೆ ಗುರಿ ಸಾಧಿಸಲು ಮಧ್ಯದಲ್ಲಿ ಮುಖ್ಯ ವಿಘ್ನ ಬರುತ್ತದೆ. ಅದು ಗೊತ್ತೇ? ಸೇವೆಯಲ್ಲಿ ಅಡಚಣೆಯೊಡ್ಡುವುದಕ್ಕಾಗಿ ಯಾವ ವಿಘ್ನ ಬರುವುದು? ಎಲ್ಲರ ಎದುರಿಗಲ್ಲ, ಆದರೆ ಅನೇಕರ ಮುಂದೆ ಬರುವ ವಿಘ್ನ ಯಾವುದು? ಮೊದಲೇ ಹೇಳುತ್ತಿರುವೆ. ಸೇವೆಯನ್ನು ಮಾಡುತ್ತಾ ನಾನೇ ಇದನ್ನು ಮಾಡಬಲ್ಲೆ ಎಂಬ 'ಅಹಂ' ಅನ್ನು ಜ್ಞಾನದ ಅಭಿಮಾನ, ಬುದ್ಧಿಯ ಅಭಿಮಾನ, ಸೇವೆಯ ಅಭಿಮಾನವೆಂಬುದನ್ನು ಗಮನದಲ್ಲಿಟ್ಟುಕೊಳ್ಳಿ. ಇನ್ನು ಮುಂದೆ ಈ ರೂಪಗಳಲ್ಲಿ ವಿಘ್ನಗಳು ಬರುವವು. ಆದರೆ ಮೊದಲೇ ಈ ಮುಖ್ಯ ವಿಘ್ನವನ್ನು ಬರಗೊಡಬೇಡಿ. ಇದಕ್ಕಾಗಿ 'ನಾನು ನಿಮಿತ್ತ' ಎಂಬ ಒಂದು ಮುಖ್ಯ ಶಬ್ದವನ್ನು ನೆನಪಿಟ್ಟುಕೊಳ್ಳಿ. ನಿಮಿತ್ತರಾಗುವರಿಂದಲೇ ನಿರಾಕಾರಿ, ನಿರಹಂಕಾರಿ ಮತ್ತು ನಮ್ರಚಿತ್ತ, ನಿಸ್ಸಂಕಲ್ಪ ಸ್ಥಿತಿಯಲ್ಲಿರಬಹುದು.

ಒಂದು ವೇಳೆ ನಾನು ಮಾಡಿದೆ, "ನಾನು" ಬಂದರೆ ಏನಾಗುವುದು ಗೊತ್ತಾ? ಹೇಗೆ ನಿಮಿತ್ತರಾಗುವುದರಿಂದ ನಿರಾಕಾರಿ, ನಿರಹಂಕಾರಿ, ನಿಸ್ಸಂಕಲ್ಪರಾಗುವಿರೋ ಹಾಗೆಯೇ "ನಾನು" ಬರುವುದರಿಂದ ಅಹಂಕಾರ, ನಿರಾಸೆ, ಮುದುಡಿಕೊಳ್ಳುವುದು, ಮುನಿಸಿಕೊಳ್ಳುವುದು, ಉದಾಸೀನತೆ ಬರುತ್ತದೆ. ನಂತರ ಇದರ ಪರಿಣಾಮವೇನಾಗುತ್ತದೆ? ಕೊನೆಗೆ ಇದರ ಪರಿಣಾಮವಾಗಿ ಮುಂದುವರೆಯುತ್ತಾ ಜೀವಂತವಾಗಿದ್ದರೂ ಸತ್ತಂತಾಗುತ್ತಾರೆ. ಅದರಿಂದ ಈ ಮುಖ್ಯ ಪಾಠವಾದ 'ನಾನು ನಿಮಿತ್ತನಾಗಿದೇನೆ' ಎಂಬುದನ್ನು ಯಾವಾಗಲೂ ನೆನಪಿಟ್ಟುಕೊಳ್ಳಿ. ನಿಮಿತ್ತರಾಗುವುದರಿಂದ ಯಾವುದೇ ಅಹಂಕಾರ ಉತ್ಪನ್ನವಾಗುವುದಿಲ್ಲ. ಇಲ್ಲವಾದರೆ "ನಾನು" ಎಂಬ ಅಭಿಮಾನ ಬಂದಾಗ ಮತ ಭೇದದ (ಭಿನ್ನಾಭಿಪ್ರಾಯಗಳ) ಚಕ್ರದಲ್ಲಿ ಬರುವಿರಿ. ಅದರಿಂದ ಈ ಅನೇಕ ಚಕ್ರಗಳಿಂದ ಸುರಕ್ಷಿತವಾಗಿರಲು ಸ್ವದರ್ಶನ ಚಕ್ರವನ್ನು ನೆನಪಿಟ್ಟುಕೊಳ್ಳಿ ಏಕೆಂದರೆ ಮಹಾರಥಿಗಳಾದಂತೆ ಮಾಯೆಯು ಮಹಾರಥಿ ರೂಪದಲ್ಲಿ ಬರುತ್ತದೆ. ಸಾಕಾರ ರೂಪದಲ್ಲಿ ಅಂತ್ಯದವರೆಗೂ ಕರ್ಮವನ್ನು ಮಾಡಿ ತೋರಿಸಿದರು. ಯಾವ ಕರ್ಮ ಮಾಡಿ ತೋರಿಸಿದರು ಎಂಬುದು ನೆನಪಿದೆಯಲ್ಲವೇ? ನಿರಹಂಕಾರಿ ಮತ್ತು ನಿರ್ಮಾಣ ಚಿತ್ತರಾಗಿ ಪರಸ್ಪರರೊಂದಿಗೆ ಪ್ರೇಮದಿಂದ ನಡೆಯಬೇಕೆಂದು ಶಿಕ್ಷಣವನ್ನು ಕೊಟ್ಟರು. ಒಂದು ಮಾತೆಯರ ಸಂಘಟನೆಯನ್ನು ಮಾಡಿ. ಕುಮಾರಿಯ ತರಬೇತಿಗಾಗಿ ತರಗತಿಯಿದ್ದಂತೆ, ಸಹಯೋಗಿಗಳಾಗುವಂತಹ ಮಾತೆಯರ ಸಂಘಟನೆಯನ್ನು ಮಧುಬನದಲ್ಲಿ ರಚಿಸಿರಿ. ಕುಮಾರಿಯರ ಜೊತೆಗೆ ಮಾತೆಯರ ಸಂಘಟನೆಯಿರಲಿ. ಸಂಘಟನೆಯ ಸಮಯದಲ್ಲಿ ಮತ್ತೆ ಬರಬೇಕಾಗುವುದು.

ಸ್ನೇಹದಲ್ಲಿ ಬಂದಾಗ ಏನಾಗುವುದು? ಸ್ನೇಹವನ್ನು ನೋಡಿದರೆ ಡ್ರಾಮಾದ ಸ್ಮೃತಿ ಬರುತ್ತದೆ ಮಧ್ಯದಲ್ಲಿ ಡ್ರಾಮಾ ಬಂದಾಗ ಶಾಂತಿ ಬಂದುಬಿಡುತ್ತದೆ. ಸ್ನೇಹದಲ್ಲಿ ಬಂದಾಗ ಎಂತಹ ಸ್ಥಿತಿ ತಯಾರಾಗುತ್ತದೆ ನದಿಯ ಹಾಗೆ ತಯಾರಾಗುತ್ತೀರಿ. ನಾವು ಯಾವ ಕರ್ಮವನ್ನು ಮಾಡುತ್ತೇವೆಯೋ, ಎಲ್ಲರೂ ಅದೇ ಕರ್ಮವನ್ನು ಅನುಸರಿಸುತ್ತಾರೆ. ಆದ್ದರಿಂದ ಶಾಂತಿಯಿಂದ ಇರಿ. ಒಂದು ವೇಳೆ ಎಲ್ಲರೂ ಜೊತೆಗಿದ್ದರೆ ಅಂತಿಮ ಕರ್ಮಾತೀತ ಸ್ಥಿತಿಯ ಅನುಭವವೇನಿತ್ತೋ ಅದು ನಾಟಕದ ಅನುಸಾರ ಬೇರೆಯಾಗಿರುತ್ತಿತ್ತು. ಸ್ನೇಹ ವಂತೂ ವತನದಲ್ಲಿಯೂ ಇದೆ ಮತ್ತು ಇರುತ್ತದೆ. ಅವಿನಾಶಿಯಾಗಿದೆಯಲ್ಲವೇ?. ಆದರೆ ಸ್ನೇಹವನ್ನು ನಾಟಕ ಶಾಂತವಾಗಿಸುತ್ತದೆ ಮತ್ತು ಇದೇ ಶಾಂತಿಯೇ ಶಕ್ತಿಯನ್ನು ತರುತ್ತದೆ. ನಂತರ (ಸತ್ಯಯುಗದಲ್ಲಿ) ಸಾಕಾರದಲ್ಲಿ

ಮಿಲನವಾಗುವುದು. ಈಗ ಅವ್ಯಕ್ತ ರೂಪದಲ್ಲಿ ಮಾಡುತ್ತಿದ್ದೇವೆ. ನಂತರ ಸಾಕಾರ ರೂಪದಲ್ಲಿ ಸತ್ಯಯುಗದಲ್ಲಿ ಮಿಲನ ಮಾಡುವೆವು. ಆ ದೃಶ್ಯ ನೆನಪಿದೆಯಲ್ಲವೇ? ಆಟವಾಡುವೆವು, ಪಾಠಶಾಲೆಗೆ ಬರುವೆವು, ಭೇಟಿಯಾಗುವೆವು. ತಾವೆಲ್ಲ ಕಣ್ಮಣಿಗಳು ಸತ್ಯಯುಗದ ದೃಶ್ಯಾವಳಿಗಳನ್ನು ವತನದಲ್ಲಿ ನೋಡುತ್ತಿರುತ್ತೀರಿ. ವತನದಲ್ಲಿ ತಂದೆ ಯಾವ ದೃಶ್ಯಗಳನ್ನು ನೋಡುತ್ತಾರೋ ಅವನ್ನು ನೋಡುತ್ತಿರುತ್ತೀರಿ ಮತ್ತು ಮುಂದೆಯೂ ನೋಡುವಿರಿ. ಈಗಂತೂ ಶಿವಶಕ್ತಿ ಮತ್ತು ಪಾಂಡವರಿಗೆ ತಂದೆಯ ನಮಸ್ತೆ. ಜ್ವಾಲಾ ರೂಪರಾಗಬೇಕು. ಜ್ವಾಲಾರೂಪದ ಕುರುಹು ತಮ್ಮದೇ ಆಗಿದೆ. ಜ್ವಾಲಾದೇವಿ ಯಾರು ಎಂಬುದು ಗೊತ್ತಿದೆಯಾ? ಎಲ್ಲ ಶಕ್ತಿಯರು ಈ ಕಲಿಯುಗದ ಸಂಸಾರ ಸುಟ್ಟು ಭಸ್ಮವಾಗುವಂತಹ ಜ್ವಾಲೆಯನ್ನು ಪ್ರಜ್ವಲಿಸುವಂತಹ ಜ್ವಾಲಾ ರೂಪ ದೇವಿಯರಾಗಬೇಕು. ಒಳ್ಳೆಯದು.

ವಿದಾಯದ ಸಮಯದಲ್ಲಿ:-

ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾದ ಎಲ್ಲ ಸೇವಾಕೇಂದ್ರಗಳ ಕಣ್ಮಣಿಗಳಿಗೆ ತಂದೆ ಮತ್ತು ದಾದರವರ ಅವ್ಯಕ್ತ ನೆನಪು ಪ್ರೀತಿ ಸ್ವೀಕಾರವಾಗಲಿ. ಜೊತೆಗೆ ಕೊಟ್ಟಂತಹ ಸೂಚನೆಗಳನ್ನು ಬೇಗನೆ ಜೀವನದಲ್ಲಿ ಧಾರಣೆ ಮಾಡುವಂತಹ ತೀವ್ರ ಪುರುಷಾರ್ಥ ಮಾಡಿ. ಒಳ್ಳೆಯದು ಶುಭರಾತ್ರಿ ಎಲ್ಲಾ ಶಿವಶಕ್ತಿ ಯರಿಗೆ ಮತ್ತು ಪಾಂಡವ ರಿಗೆ ತಂದೆಯ ನಮಸ್ತೆ.

**ಅವ್ಯಕ್ತ ಮುರಳಿ 02-02-1969.**

**ಅವ್ಯಕ್ತ ಮಿಲನದ ಅನುಭವದ ವಿಧಿ.**

ಆತ್ಮಿಕ ಸ್ಥಿತಿಯಲ್ಲಿದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1.ನಾನು ಜ್ಞಾನ-ಸಹಿತ ಪ್ರೇಮವುಳ್ಳ ಯಥಾರ್ಥ ಪ್ರೇಮ ಸ್ವರೂಪ.

2. ನಾನು "ಬಾಪ್ ದಾದಾರವರೊಂದಿಗೆ ಮಿಲನ ಮಾಡಬೇಕು" ಎಂಬ ದೃಢ ಸಂಕಲ್ಪದಿಂದ ಅಲೌಕಿಕ ಅನುಭವ ಹೊಂದುವ ದಿವ್ಯ ಬುದ್ಧಿ ಮತ್ತು ದಿವ್ಯದೃಷ್ಟಿ ಸ್ವರೂಪ.

3.ನಾನು ದಿನವಿಡೀ ಅವ್ಯಕ್ತ ಸ್ಥಿತಿ ಮತ್ತು ಅಂತರ್ಮುಖತೆಯ ಸ್ಥಿತಿಯಲ್ಲಿದ್ದು ಬಾಪ್ ದಾದಾರವರೊಂದಿಗೆ ಆತ್ಮಿಕ ಸಂಭಾಷಣೆ ಮಾಡಿ ಸಹಜವಾಗಿ ಅವ್ಯಕ್ತ ಮಿಲನದ ಅನುಭವ ಮಾಡಿದ್ದೇನೆ.

4. ನಾನಾತ್ಮ ಶುದ್ಧವಾದ ಪ್ರೇಮವುಳ್ಳ ನಿರ್ಮೋಹಿ.

5. ನಾನು ಪ್ರೇಮ ಮತ್ತು ಅಲಿಪ್ತ ಸ್ವರೂಪವನ್ನು ಜೊತೆ-ಜೊತೆಗೆ ಧಾರಣೆ ಮಾಡಿದ್ದೇನೆ.

6. ನಾನು ಅಂತರ್ಮುಖಿ ಮತ್ತು ಸೂಕ್ಷ್ಮ ದೇವತಾ ಸ್ವರೂಪ.

7. ನಾನು ಸೂಕ್ಷ್ಮವತನವಾಸಿ.

8. ನಾನು ವ್ಯಕ್ತ ಭಾವವನ್ನು ಬಿಟ್ಟು, ಅವ್ಯಕ್ತ ಸ್ಥಿತಿಯಿಂದ ಬಾಬಾರವರ ಪ್ರತಿಕ್ರಿಯೆಯನ್ನು ಗ್ರಹಿಸುತ್ತೇನೆ.

9. ನಾನು ನಿಮಿತ್ತನು, ಆದಕಾರಣ ವಿಘ್ನವಿನಾಶಕ, ನಿರಾಕಾರಿ, ನಿರಹಂಕಾರಿ ಮತ್ತು ನಮ್ರಚಿತ್, ನಿಸಂಕಲ್ಪ ಸ್ಥಿತಿ ಸ್ವರೂಪವಾಗಿದ್ದೇನೆ.

10. ನಾನು ನಿರ್ಮಾಣಚಿತ್ತ ಸ್ವರೂಪ.

11. ನಾನು ಜ್ವಾಲಾ ರೂಪ ದೇವಿ ಯಾಗಿದ್ದೇನೆ.

**ಹೆಚ್ಚಿನ ಮಾಹಿತಿಗಾಗಿ.**

1.ಮನನ-ಚಿಂತನೆ(ಮನನ ಶಕ್ತಿ) : ಅವ್ಯಕ್ತ ಮುರಳಿ (01-02-1979 - ಮನನಶಕ್ತಿಯೇ ಮಾಯಾಜಿತ್ ರಾಗುವ ಸಾಧನ.

23-12-1987 - ಮನನ ಶಕ್ತಿ ಮತ್ತು ಮಗ್ನಸ್ಥಿತಿ.

10-01-1988 - ಮನನ ಮಾಡುವ ವಿಧಿ ಮತ್ತು ಮನನ ಶಕ್ತಿಯನ್ನು ಬೆಳೆಸಿಕೊಳ್ಳುವ ಯುಕ್ತಿಗಳು.

01-04-1981 - ಮನನ ಶಕ್ತಿಯ ಮೂಲಕ ಸರ್ವಶಕ್ತಿಗಳ ಸ್ವರೂಪದ ಅನುಭೂತಿ).

2. ನಿಮಿತ್ತ ಸ್ಥಿತಿ : ಅವ್ಯಕ್ತ ಮುರಳಿ (23-11-1979,18-06-1969, 24-01-1970, 22-01-1984, 24-02-1984, 01-01-1990).